ಹುಬ್ಬಳ್ಳಿ: ಕೆಎಲ್ಇ ಸಂಸ್ಥೆಯ ಪಿ.ಸಿ. ಜಾಬಿನ ವಿಜ್ಞಾನ ಮಹಾವಿದ್ಯಾಲಯದಲ್ಲಿ ಆ.17ರಂದು ಬೆಳಗ್ಗೆ 8.30ಕ್ಕೆ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » HUBBALLI

ಟಾಪ್ ನ್ಯೂಸ್

**ಅನ್ನ ಸಂತರ್ಪಣೆ ಇಂದು** ಹಾವೇರಿ: ಸ್ಥಳೀಯ ನಗರಸಭೆ ಆವರಣದಲ್ಲಿರುವ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಸ್ವಾಮೀಜಿಗಳ ಗದ್ದುಗೆಗೆ ಶ್ರಾವಣ ಮಾಸದಂಗವಾಗಿ ಆ. 13ರಂದು ರುದ್ರಾಭಿಷೇಕ ಹಾಗೂ ಅನ್ನಸಂತರ್ಪಣೆ ಜರುಗಲಿದೆ ಎಂದು ಶಿವಬಸಪ್ಪ ಟೊಂಕದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಂಥಾಲಯ ಸಿಬ್ಬಂದಿ ನೇಮಕಕ್ಕೆ ಕ್ರಮ

## ರಾಜ್ಯ ಮಟ್ಟದ ಗ್ರಂಥಪಾಲಕರ ದಿನಾಚರಣೆ | ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಹೇಳಿಕೆ

■ ವಿಜಯವಾಣಿ ಸುದ್ದಿಜಾಲ ಹಾನಗಲ್ಲ

ಗ್ರಂಥಾಲಯಗಳಲ್ಲಿರುವ ಖಾಲಿ ಹುದ್ದೆ ತುಂಬುವ ಕುರಿತು ಸರ್ಕಾರ ಚಿಂತನೆ ನಡೆಸಿದ್ದು, ಕೊರತೆಯಿರುವ ಪುಸ್ತಕಗಳ ಖರೀದಿಗೆ ಶಾಸಕರ ಅನುದಾನ ಬಳಕೆ ಮಾಡಿಕೊಳ್ಳಬಹುದು ಎಂದು ಮುಜರಾಯಿ ಹಾಗೂ ಜವಳಿ ಸಚಿವ ರುದ್ರಪ್ಪ ಲಮಾಣಿ ಹೇಳಿದರು.

ಪಟ್ಟಣದ ಸದಾಶಿವ ಮಂಗಲ ಭವನದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ ಶನಿವಾರ ಆಯೋಜಿಸಿದ್ದ ರಾಜ್ಯ ಮಟ್ಟದ ಗ್ರಂಥಪಾಲಕರ ದಿನಾಚರಣೆ ನಿಮಿತ್ತ ಪುಸ್ತಕ ಹಾಗೂ ಕಲಾಕೃತಿಗಳ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ತಂತ್ರಜ್ಞಾನ ಬೆಳೆದಂತೆ ಕಂಪ್ಯೂಟರ್‌ಗಳ ಬಳಕೆ ಹೆಚ್ಚಾಗಿದ್ದು, ಪುಸ್ತಕ ಓದುಗರ ಸಂಖ್ಯೆ ವಿರಳವಾಗುತ್ತಿದೆ. ಹೀಗಾಗಿ ಮನೆ-ಮನೆಗಳೂ ಗ್ರಂಥಾಲಯವಾಗಬೇಕು. ಒಳ್ಳೆಯ ಪುಸ್ತಕಗಳು ಉತ್ತಮ ಸ್ನೇಹಿತರಿದ್ದಂತೆ. ಜ್ಞಾನ ಭಂಡಾರವೂ ಊರ್ಜಿತವಾಗುತ್ತದೆ ಎಂದರು.

ನೂತನ ಗ್ರಂಥಾಲಯದ ಕಟ್ಟಡ ಉದ್ಘಾಟಿಸಿದ ವಿಧಾನಸಭಾಧ್ಯಕ್ಷ ಕೆ.ಬಿ. ಕೋಳಿವಾಡ ಮಾತನಾಡಿ, ಗ್ರಂಥಗಳು ನಮ್ಮ ಜ್ಞಾನವನ್ನು ಮತ್ತಷ್ಟು ವೃದ್ಧಿಸುವುದರೊಂದಿಗೆ ಮನುಷ್ಯನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿಸುತ್ತವೆ. ಗ್ರಂಥಾಲಯದ ಉದ್ದೇಶ ಈಡೇರಲು ಓದುಗರ ಸಂಖ್ಯೆ ಹೆಚ್ಚಿಸುವ ಕಾರ್ಯವಾಗಬೇಕು. ಸರ್ಕಾರ ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಗುಣಮಟ್ಟದ ಗ್ರಂಥಾಲಯ ನಿರ್ಮಿಸಿದೆ. ಅದರಲ್ಲಿನ ಪುಸ್ತಕಗಳಲ್ಲಿನ ವಿಷಯ ಮಸ್ತಕಕ್ಕಿಳಿದಾಗ ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ ಅರ್ಥ ಬರುತ್ತದೆ. ಪ್ರಾಮಾಣಿಕವಾಗಿ ಕೊಡುಗೆ ನೀಡಿದವರನ್ನು ಸನ್ಮಾನಿಸುತ್ತಿರುವುದು ಸ್ತುತ್ಯಾರ್ಹ ಎಂದರು.



ಹಾನಗಲ್ಲಿನಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ ಆಯೋಜಿಸಿದ್ದ ರಾಜ್ಯ ಮಟ್ಟದ ಗ್ರಂಥಪಾಲಕರ ದಿನಾಚರಣೆಯನ್ನು ಸ್ಪೀಕರ್ ಕೆ.ಬಿ. ಕೋಳಿವಾಡ ಉದ್ಘಾಟಿಸಿದರು. ಸಚಿವ ರುದ್ರಪ್ಪ ಲಮಾಣಿ, ಶಾಸಕ ಮನೋಹರ ತಹಸೀಲ್ದಾರ ಇತರರಿದ್ದರು.

ಶಾಸಕ ಮನೋಹರ ತಹಸೀಲ್ದಾರ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಸತೀಶ ಕುಲಕರ್ಣಿ ಉಪನ್ಯಾಸ ನೀಡಿದರು. ಜಿಪಂ ಅಧ್ಯಕ್ಷ ಕೊಟ್ರೇಶಪ್ಪ ಬಸೇಗಣ್ಣಿ, ತಾಪಂ ಅಧ್ಯಕ್ಷ ಶಿವಬಸಪ್ಪ ಪೂಜಾರ, ಪುರಸಭೆ ಅಧ್ಯಕ್ಷೆ ಹಸೀನಾಬೇಗಂ ನಾಯ್ಕನವರ, ಉಪಾಧ್ಯಕ್ಷ ಗಣೇಶ ಮೂಡ್ಲಿಯವರ, ಸದಸ್ಯ ಸಂತೋಷ ಸುಣಗಾರ, ಜಿಪಂ ಸದಸ್ಯರಾದ ರಾಘವೇಂದ್ರ ತಹಸೀಲ್ದಾರ, ಟಾಕನಗೌಡ ಪಾಟೀಲ, ಪ್ರಕಾಶಗೌಡ ಪಾಟೀಲ, ಆರ್.ಎಸ್. ಪಾಟೀಲ, ಯಾಸೀರಖಾನ ಪಠಾಣ, ಸಿ.ಎಸ್. ಬಡಿಗೇರ, ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷ ಶ್ರೀಕಂಠ ಕೂಡಿಗೆ, ಸಾಹಿತಿ ಪೂರ್ಣ ಶ್ರೀನಿವಾಸ, ದೇವರಾಜ್ ಅರಸು ನಿಗಮದ ನಿರ್ದೇಶಕ ರುದ್ರಪ್ಪ ಕಂಬಾರ, ಅಧಿಕಾರಿಗಳಾದ ಬಿ.ವಿ. ಕೊಣ್ಣೂರ, ಮಲ್ಲೇಶಪ್ಪ, ಸಿ.ಜಿ. ವೆಂಕಟೇಶ, ಪ್ರಕಾಸ ಜೈನ, ತಾಲೂಕು ತಹಸೀಲ್ದಾರ್ ಶಕುಂತಲಾ ಚೌಗಲಾ ಇತರರು ಉಪಸ್ಥಿತರಿದ್ದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಡಾ. ಸತೀಶಕುಮಾರ ಹೊಸಮನಿ ಸ್ವಾಗತಿಸಿದರು. ಶಿವಾನಂದ ಕ್ಯಾಲಕೊಂಡ ಹಾಗೂ ಆರ್.ಜಯಲಕ್ಷ್ಮೀ ನಿರೂಪಿಸಿದರು.

### ಸಾಧಕರಿಗೆ ವಿಜ್ಞಾನ ಸೇವಾ ಪ್ರಶಸ್ತಿ ಪ್ರದಾನ

ಗ್ರಂಥಾಲಯ ವಿಜ್ಞಾನ ಕ್ಷೇತ್ರಕ್ಕೆ ಕೊಡುಗೆ ನೀಡಿದ ಗಣ್ಯರಿಗೆ ವಿಜ್ಞಾನ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಿದರು. ಮಂಗಳೂರು ವಿವಿ ಡಾ.ಕೈಸರ್ ಮಹೀಬುಲ್ಲಾಖಾನ, ಗುಲಬರ್ಗಾ ವಿವಿ ಡಾ.ದೇವೇಗೌಡ ಪಾಟೀಲ, ಬೆಳಗಾವಿ ತಾಂತ್ರಿಕ ವಿವಿ ಡಾ.ಕೆ.ಆರ್. ಮುಲ್ಲಾ, ಮೈಸೂರು ವಿವಿ ಡಾ.ಎನ್.ಎಸ್. ಹರಿನಾರಾಯಣ, ಬೆಂಗಳೂರಿನ ರಾಮನ್ ಸಂಶೋಧನಾ ಸಂಸ್ಥೆಯ ಡಾ. ಬಿ.ಎಂ. ಮೀರಾ, ಮೈಸೂರಿನ ಸೈಯ್ಯದ್‌ಇಷಾಕ್, ಬೆಂಗಳೂರ ಉತ್ತರ ವಲಯ ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕ ದಿವಾಕರ, ಹಾವೇರಿ ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿ ಜಿ.ಎಸ್. ವೆಂಕಟೇಶ್ವರಿ ಅವರಿಗೆ ಗ್ರಂಥಾಲಯ ವಿಜ್ಞಾನ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಗಣನೀಯ ಸೇವೆ ಸಲ್ಲಿಸಿದ ಗ್ರಂಥಪಾಲಕರನ್ನು ಸನ್ಮಾನಿಸಿ ಗೌರವಿಸಲಾಯಿತು.